ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 10- 15
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಸೂರು ಒಡೆಯರ ಕಾಲದ ನೃತ್ಯಗಾರ್ತಿಯರ ವಸ್ತ್ರ ಮತ್ತು ಆಭರಣಗಳು

ದೀಕ್ಷಾ ಚೌದ್ರಿ*

*ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***

*ಇತಿಹಾಸವೆಂದರೆ ಸಾಮಾನ್ಯವಾಗಿ ಯುದ್ಧ, ಆಕ್ರಮಣ, ಕಲೆ, ವಾಸ್ತುಶಿಲ್ಪ ಹಾಗೂ ಆಡಳಿತಾತ್ಮಕ ಸಾಧನೆಯಷ್ಟೇ ಅಲ್ಲ ಅದರಾಚೆಗೂ ಅನೇಕ ಮಾನವ ಸಂಗತಿಗಳನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಸೃಜನಶೀಲನಾದ ಮನುಷ್ಯನ ಜೀವನ ನಾಗರಿಕತೆ ಬೆಳೆದಂತೆಲ್ಲ ಬದಲಾಗುತ್ತಾ ಬಂದಿದೆ. ಅವನ ಆಚಾರ-ವಿಚಾರ, ನಂಬಿಕೆಗಳೂ ಕಾಲದಿಂದ ಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ ರೂಪಾಂತರ ಹೊಂದುತ್ತಾ ಬಂದಿದೆ. ಅವುಗಳಲ್ಲಿ ಪ್ರಮುಖವಾದುದು ಅವನ ಉಡುಗೆ-ತೊಡುಗೆಗಳು. ಅಂದರೆ ಅವನ ವಸ್ತ್ರ ಹಾಗೂ ಆಭರಣಗಳು. ಮಾನವ ಬಳಸಿದ ವಸ್ತ್ರ ಮತ್ತು ಆಭರಣಗಳ ವಿಶೇಷತೆ ಇತಿಹಾಸದಲ್ಲಿ ಅತ್ಯಂತ ಕುತೂಹಲಕರ ಸಂಗತಿಯಾಗಿದೆ. ಈ ಹಿನ್ನಲೆಯಲ್ಲಿ ಮೈಸೂರು ಒಡೆಯರ ಕಾಲದ ನೃತ್ಯಗಾರ್ತಿಯರು ಧರಿಸುತಿದ್ದ ವಸ್ತ್ರ ಮತ್ತು ಆಭರಣಗಳ ವಿಶೇಷತೆ ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ.*

**Keywords:** *ಮೈಸೂರು ಒಡೆಯರು, ನೃತ್ಯ, ಕಲೆ, ವಸ್ತ್ರ, ಆಭರಣ.*

## ಪೀಠಿಕೆ

ಸಾಮಾಜಿಕ ಜೀವಿಯಾದ ಮನುಷ್ಯನು ತನ್ನ ಸಮಾಜ ಮತ್ತು ಸಂಸ್ಕೃತಿ ವಿಕಾಸ ಹೊಂದಿದಂತೆ ಅವನ ವಸ್ತ್ರ ಹಾಗೂ ಆಭರಣಗಳಲ್ಲಿಯೂ ಕೂಡ ಹೊಸ ಹೊಸ ಮಾದರಿಗಳನ್ನು ಕಂಡುಕೊಂಡನು. ತಾನು ಇತರರಿಗಿಂತ ಸುಂದರವಾಗಿ ಕಾಣಿಸಬೇಕೆಂಬುದು ಮಾನವನ ಸಹಜಗುಣ. ಈ ಸಹಜ ಗುಣ ಮತ್ತು ಅವನ ಆಕಾಂಕ್ಷೆಗಳು ವಸ್ತ್ರ ಮತ್ತು ಆಭರಣಗಳ ಅನ್ವೇಷಣೆಗೆ ದಾರಿಮಾಡಿಕೊಟ್ಟಿತ್ತೆನ್ನಬಹುದು. ಇದರಿಂದಾಗಿ ಮಾನವ ಪ್ರಕೃತಿದತ್ತವಾಗಿ ಸಿಗುತ್ತಿದ್ದ ಮರಗಳ ಎಲೆಗಳು, ಕಪ್ಪೆಚಿಪ್ಪು, ದಂತ, ಕಲ್ಲಿನ ಹರಳುಳು ಹೀಗೆ ಮುಂತಾದವುಗಳನ್ನು ಆಭರಣಗಳಾಗಿ ಮತ್ತು ಹತ್ತಿ ಮತ್ತು ಪ್ರಾಣಿಗಳ ಚರ್ಮ, ಬಿದುರುಗಳನ್ನು ವಸ್ತ್ರಗಳ ರಚನೆಗಾಗಿ ಬಳಕೆ ಮಾಡುತ್ತಿದ್ದ ಇಂತಹ ವಿಶಿಷ್ಟತೆಯನ್ನು ಹೊಂದಿರುವ ವಸ್ತ್ರ ಮತ್ತು ಆಭರಣಗಳ ಮೇಲೆ ಪುರುಷರಿಗಿಂತ ಮಹಿಳೆಯರಿಗೆ ಹೆಚ್ಚು ಪ್ರಿಯವಾದುದು.

ಇತಿಹಾಸ ವಿಷಯದಲ್ಲಾಗಿರುವ ಸಂಶೋಧನೆಗಳನ್ನು ಪುನಾರವಲೋಕಿಸಿದಾಗ ವಸ್ತ್ರ ಮತ್ತು ಆಭರಣಗಳ ಸಂಶೋಧನೆಗೆ ನೀಡಿದ ಪ್ರಾಶಸ್ತ್ಯ ಅತ್ಯಂತ ಕಡಿಮೆ ಎನ್ನಬಹುದು. ಪ್ರಾಣಿಗಳಂತೆ ಪ್ರಕೃತಿ ಸಹಜ ಜೀವನ ನಡೆಸುತ್ತಿದ್ದ ಮಾನವನು ಗವಿಗಳಲ್ಲಿ ವಾಸಿಸುತ್ತಿದ್ದ ಬುದ್ಧಿ ವಿಕಾಸವಾದಂತೆ ಋತುಮಾನಗಳಿಗೆ ಅನುಗುಣವಾಗಿ ಪ್ರಕೃತಿಯಲ್ಲಿ ದೊರೆಯುತ್ತಿದ್ದ ವಸ್ತುಗಳನ್ನು ಬಳಸುತಿದ್ದ.

***Please cite this article as:*** ದೀಕ್ಷಾ ಚೌದ್ರಿ. (2022). ಮೈಸೂರು ಒಡೆಯರ ಕಾಲದ ನೃತ್ಯಗಾರ್ತಿಯರ ವಸ್ತ್ರ ಮತ್ತು ಆಭರಣಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(4), 10–15.

ಚಳಿಗಾಲದಲ್ಲಿ ಸೊಪ್ಪು ಸೆದೆ, ಪ್ರಾಣಿ ಚರ್ಮಗಳನ್ನು ಹೊದಿಕೆಯಾಗಿ ಬಳಸುತ್ತಿದ್ದ. ಹೀಗೆ ನಾರು ಬೇರುಗಳ ಉಪಯೋಗ ತಿಳಿದುಕೊಂಡು ಹೆಣೆಯುವುದನ್ನು ಕಂಡುಕೊಂಡ ಮಾನವ ಕಾಲಾಂತರದಲ್ಲಿ ವಸ್ತ್ರವನ್ನು ಕಂಡುಕೊಂಡನು.

ಭಾರತದ ಸಿಂಧೂ ನಾಗರಿಕತೆಯ ಸ್ಥಳಗಳಾದ ಹರಪ್ಪ ಮತ್ತು ಮಹೆಂಜೋದಾರೊ ಉತ್ಖನನದಲ್ಲಿ ದಾರ ಹುರಿಮಾಡಿಕೊಳ್ಳುವ ಪರಿಕರಗಳು ದೊರೆತಿರುವುದು ಆಗಿನ ಕಾಲದ ಜನರು ಬಟ್ಟೆ ತಯಾರಿಕೆ ಹಾಗೂ ಬಳಕೆಯ ಬಗ್ಗೆ ಅರಿವಿತ್ತು ಎಂಬುದಕ್ಕೆ ಪ್ರಮುಖ ಆಧಾರಗಳಾಗಿವೆ. ವೇದ ಮಂತ್ರಗಳಲ್ಲಿ 'ತಂತು' ಎಂಬ ಪದವಿದೆ. 'ತಂತು'ಎಂದರೆ ಎಳೆ ಎಂದರ್ಥ. ಈ ಎಳೆ ಪದದ ಬಳಕೆ ಗಮನಿಸಿದರೆ ಆಗಲೇ ಮಗ್ಗ ರೂಪಿತವಾಗಿರಬಹುದಾಗಿದೆ. ಭಾರತದ ಬಗೆಗಿನ ಗ್ರೀಕ್ ರೋಮನ್ ಮೂಲಗಳಿಂದ, ಭಾರತದ ಇತಿಹಾಸ, ಮಹಾಕಾವ್ಯ, ಪುರಾಣಗಳಿಂದ ತಮಿಳಿನ ಸಂಗಂ ಸಾಹಿತ್ಯದಿಂದ, ಭಾರತದ ಕುರಿತ ಮುಸ್ಲಿಂ ಮತ್ತು ಯುರೋಪಿನ ಶಾಸನಗಳು, ಕೆತ್ತನೆಗಳು ಚಿತ್ರಕಲೆ, ಮೌಖಿಕ ಪರಂಪರೆಯಿಂದ ವಸ್ತ್ರೋದ್ಯಮದ ನೇಯ್ಗೆ ಹೆಣಿಕೆಗಳ ಬಗ್ಗೆ ತಿಳಿಯುತ್ತದೆ.

ಚೀನಾ ತುಂಬಾ ಹಿಂದಯೇ ರೇಷ್ಮೆಯನ್ನು ಕಂಡುಕೊಂಡ ದೇಶ, ಬೌದ್ಧ ಧರ್ಮಪ್ರಚಾರಕ್ಕೆ ಹೋದ ಭಾರತಿಯರು ಇದನ್ನು ಭಾರತಕ್ಕೆ ತಂದರು. ಹೀಗೆ ಪೂರ್ವದ ಚೈನಾದಿಂದ ವಾಯುವ್ಯದ ಗ್ರೀಕ್‌ಗಳಿಂದ ಭಾರತದ ವಸ್ತ್ರೋದ್ಯಮದ ಮೇಲೆ ಪ್ರಭಾವಗಳಾದವು. ಇಲ್ಲಿ ಈಜಿಪ್ಟ್ ಸಂಪರ್ಕದ ಪ್ರಭಾವವೂ ಸಾಕಷ್ಟಿದೆ. ಕ್ರಿ.ಶ 5ನೇ ಶತಮಾನದ ವೇಳೆಗೆ ಬಟ್ಟೆಗೆ ಚಿತ್ರದ ಅಚ್ಚೊತ್ತುವ ರೂಪ ಬಳಕೆಗೆ ಬಂದಿದ್ದರ ಉಲ್ಲೇಖಗಳಾಗಿ ಗುಜರಾತ್‌ನಲ್ಲಿ ಅಚ್ಚಿನ ಮುದ್ರೆಗಳು ಸಿಕ್ಕಿವೆ. ಹಾಗೆಯೇ ಬಗೆಬಗೆಯ ಮುದ್ರೆಗಳು ಈಜಿಪ್ಟ್‌ನಲ್ಲಿಯೂ ಸಿಕ್ಕಿರುವುದನ್ನು ಗಮನಿಸಿದರೆ, ಆ ವೇಳೇಗಾಗಲೇ ಭಾರತದ ಮತ್ತು ಈಜಿಪ್ಟ್‌ಗಳ ನಡುವೆ ವಸ್ತ್ರಗಳ ಸಂಪರ್ಕ ಮತ್ತು ವ್ಯಾಪಾರ ವ್ಯವಹಾರ ಏರ್ಪಟ್ಟಂತೆ ಕಾಣುತ್ತದೆ. ಭಾರತದಿಂದ ಹತ್ತಿಯಿಂದಾದ ವಸ್ತ್ರಗಳು ರವಾನೆಯಾಗುತ್ತಿದ್ದವು ಗುಜರಾತ್‌ನ ಕಚ್‌ನಲ್ಲಿಯ 13ನೇ ಶತಮಾನದ ಕೆಲವು ಭಿತ್ತಿ ಚಿತ್ರಗಳಲ್ಲಿ ಮುಸ್ಲಿಂ ಶೈಲಿಯ ಬಟ್ಟೆ ರೂಪ ಹಾಗೂ ಆಶಯಗಳನ್ನು ಹೋಲುವಂತಿವೆ.

ಭಾರತದ 'ಪಟೋಲ' ರೇಷ್ಮೆ 13ನೇ ಶತಮಾನದಲ್ಲಿ ತುಂಬ ಜನಪ್ರಿಯವಾಗಿತ್ತು. ಪೋರ್ಚುಗೀಸರು, ಡಚ್ಚರು ಮೊದಲಾದ ದೇಶಗಳವರು ಈ ಬಟ್ಟೆಗಳನ್ನು ಕೊಳ್ಳುತ್ತಿದ್ದರು. 17ನೇ ಶತಮಾನದ ನಂತರ ಇಂಗ್ಲಿಷರ ಈಸ್ಟ್ ಇಂಡಿಯ ಕಂಪನಿ ಭಾರತದಿಂದ ರೇಷ್ಮೆ ಹತ್ತಿ ಮತ್ತು ರೇಷ್ಮೆ ಬೆರೆತ ವಸ್ತ್ರಗಳು ಹಾಗೂ ಸಾದಾ ಹತ್ತಿ ವಸ್ತ್ರಗಳು ಜೊತೆಗೆ ತೀರಾ ತೆಳುವಾದ ಅಂದರೆ ಬೆಂಕಿಪೆಟ್ಟಿಗೆಯಲ್ಲಿ ಹಿಡಿಸಬಹುದಾದಷ್ಟು ನಾಜೂಕಾದ ವಸ್ತ್ರಗಳನ್ನು ಬಂಗಾಳ, ಬಿಹಾರ ಮತ್ತು ಓರಿಸ್ಸಾಗಳಿಂದ ಕೊಂಡು ಯುರೋಪ್ ಮೊದಲಾದ ದೇಶಗಳಿಗೆ ಸಾಗಿಸಿ ವ್ಯಾಪಾರ ಮಾಡತೊಡಗಿದರು

ಪ್ರಕೃತಿಯಲ್ಲಿ ಲಯಬದ್ಧವಾದ ವ್ಯವಸ್ಥೆಗೆ ಮಾನವನು ತೋರಿಸಿದ ದೈಹಿಕ ಪ್ರತಿಕ್ರಿಯೆಯೇ ನರ್ತನಕ್ಕೆ ಮೂಲ. ನೃತ್ಯ ಮಾನವನಿಂದ ವಿಕಾಸಗೊಂಡ ಬಹು ಪುರಾತನ ಕಲೆ. ಸಂಗೀತದಂತೆಯೇ ನಾಟ್ಯವನ್ನು ರಾಜರಿಂದ ಹಿಡಿದು ಜನಸಾಮಾನ್ಯರವರಿಗೆ ಎಲ್ಲರೂ ಇಷ್ಟಪಡುವ ಕಲೆಯಾಗಿತ್ತು. ಹಾಗಾಗಿ ಈ ಕಲೆಗೆ ಜನಮನ್ನಣೆ ಮತ್ತು ರಾಜಾಶ್ರಯವು ಲಭಿಸಿತ್ತು. ಸಿಂಧೂ ನಾಗರಿಕತೆಯ ಅವಶೇಷಗಳಲ್ಲಿ ದೊರೆತಿರುವ ನೃತ್ಯಭಂಗಿಯ ಸ್ತ್ರೀ ಪ್ರತಿಮೆಯಲ್ಲಿರುವ ಸ್ತ್ರೀಯು ಎಡಗೈಯನ್ನು ತನ್ನ ಸೊಂಟದ ಮೇಲೆ ಇಟ್ಟುಕೊಂಡಿದ್ದು ಎಡಗೈಗೆ ಬಾಹುಭಾಗದಿಂದ ಮಣಿಕಟ್ಟಿನವರೆಗೆ ಬಳೆಗಳನ್ನು ತೊಟ್ಟಿರುವುದು

ಗಮನಿಸಬಹುದು. ಅಲ್ಲದೆ ಬಲಗೈಗೆ ಬಾಹುಬಂಧಿ ಮತ್ತು ಮುಂಗೈಗೆ ಎರಡಳೆಯ ಕಂಕಣ ಧರಿಸಿರುವುದನ್ನು ಗಮನಿಸಬಹುದು. ಇದರೊಂದಿಗೆ ಪದಕವಿರುವ ಕಂಠೀಹಾರ ಧರಿಸಿದ್ದಾಳೆ. ನಾಗರಿಕತೆಯ ಕಾಲದಲ್ಲಿ ನೃತ್ಯಗಾರ್ತಿಯರು ಒಂದೊಂದು ತೋಳಿಗೆ ಒಂದೊಂದು ಮಾದರಿಯ ಹಾಗೂ ವಿಭಿನ್ನ ಸಂಖ್ಯೆಯ ಆಭರಣಗಳನ್ನು ಧರಿಸಿದ್ದರು ಎಂಬುದು ಗಮನಾರ್ಹ ಸಂಗತಿ.

ಬಾದಾಮಿ ಚಾಳುಕ್ಯ, ಕಲ್ಯಾಣ ಚಾಳುಕ್ಯ, ಹೊಯ್ಸಳ, ವಿಜಯನಗರ, ಮೈಸೂರು ಎಲ್ಲಾ ದಕ್ಷಿಣ ಭಾರತದ ಬಹುತೇಕ ಎಲ್ಲಾ ರಾಜಮನೆತನದವರು ನೃತ್ಯಕ್ಕೆ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಕೃತಿಗಳೊಂದಿಗೆ ಶಾಸನಗಳು ಸಹ ಧೃಡಪಡಿಸುತ್ತದೆ. ಮೈಸೂರು ಒಡೆಯರ ಕಾಲದಲ್ಲಿ ನೃತ್ಯ ತುಂಬಾ ಪ್ರಾಮುಖ್ಯತೆ ಪಡೆದ ಕಲೆಯಾಗಿತ್ತು ನೃತ್ಯವನ್ನು ಸಾಮಾನ್ಯವಾಗಿ ಎಲ್ಲಾ ಹಬ್ಬ ಉತ್ಸವಗಳ ಸಮಯದಲ್ಲಿ ಮಾಡಿತ್ತಿದ್ದರು ನೃತ್ಯವನ್ನು ಅಭಿನಯಿಸುತ್ತಿದ್ದವರು ದೇವದಾಸಿಯರು ಮತ್ತು ರಾಜನ ಆಸ್ಥಾನದ ನರ್ತಕಿಯರು ದಳವಾಯಿ ನಂಜರಾಜಯ್ಯ ಮತ್ತು ದಳವಾಯಿ ಬ್ರಾಹ್ಮಣ ವಿದ್ವಾಂಸರಿಗೆ ಮತ್ತು ನೃತ್ಯಗಾರ್ತಿಯರಿಗೆ ಶಿರಾಭರಣ, ಕರ್ಣಕುಂಡಲ, ಅಂಗುಳೀಯಕವನ್ನು ದಾನ ಮಾಡಿದ್ದುದಾಗಿ ಅಗ್ರಹಾರ ಶಾಸನಗಳಲ್ಲಿ ವಿವರಿಸಲಾಗಿದೆ.

ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ' ಅಂದು ಮೈಸೂರು ಸಂಸ್ಥಾನದಲ್ಲಿ ಪ್ರಚಲಿತವಿದ್ದ ನೃತ್ಯ ಸಂಪ್ರದಾಯ ಪೂರ್ಣ ಮಾಹಿತಿಯನ್ನು ನೀಡುತ್ತದೆ. ರಾಜನ ಒಡ್ಡೋಲಗದಲ್ಲಿ ನರ್ತಿಸಬೇಕಾದ ನರ್ತಕಿಯರು ಅತ್ಯಂತ ಶ್ರೇಷ್ಟಮಟ್ಟದವರಾಗಿ ಕನಕಮಯ ರತ್ನಖಚಿತ ಆಭರಣಗಳಿಂದ ಶೋಭಿತರಾಗಿ ಸರ್ವಾಂಗ ಸುಂದರಿಯರಾಗಿದ್ದರು. ಇವರಿಗಾಗಿ ಅರಮನೆಯಲ್ಲಿ ನಾಟ್ಯ ಮಂಟಪವನ್ನು ಕಲಾತ್ಮಕವಾಗಿ ನಿರ್ಮಿಸಲಾಗುತ್ತಿತ್ತು. ನರ್ತಕಿಯರನ್ನು ಮಂಗಳವಾದ್ಯಗಳೊಂದಿಗೆ ಬರಮಾಡಿಕೊಳ್ಳುತ್ತಿತ್ತು.

***'ಆ ಸಮಯದಲ್ಲಿ ತೊರ್ಯತ್ರಯ ಮಂಗಳ***
***ಘೋಷವೆಸೆಯೇ ನಸನಗುತ***
***ಭಾಸುರ ಬಿರುದನನಾಟ್ಯ ಚಾದುಗಳು ಸಂ***
***ತೋಷದೆ ನಡೆತಂದರೊಲಿರು'***

ರಾಜನ ಮುಂದೆ ಮೂರು ಪ್ರಕಾರಗಳ ನೃತ್ಯಗಳನ್ನು ನರ್ತಕಿಯರು ಪ್ರದರ್ಶಿಸುತ್ತಿದ್ದರು. ಪುಷ್ಪಾಂಜಲಿ, ಕೋಲಾಚಾರಿ ಚಿಂದು, ಕಟ್ಟಾಳ ನೃತ್ಯ, ನವಿಲು ನೃತ್ಯ, ಜಕ್ಕಣಿ ಮುಂತಾದವು

ಚಂದ್ರಶೇಖರ ಕವಿ ಕೊಡುವ ನಾಟ್ಯಸುಂದರಿಯ ಅಲಂಕಾರ ಈ ರೀತಿ ಇದೆ; ಇನ್ನೇನು ನಾಟ್ಯ ಪ್ರಾರಂಭವಾಗಬೇಕಾಗಿದೆ, "ಆಗ ಪಟ್ಟಾವಳಿ ಜನನಿಕೆಯೊಳಗೆ ಸಮ ಕಟ್ಟಿನ ರನ್ನದೊಡವಿನ, ಮುತ್ತಿನ ಮಾಲೆಗಟ್ಟಿನ, ಪೊಂಬಟ್ಟೆಯ ಚಲ್ಲಣದ ನಿರೆಗೆಜ್ಜೆ ಗಟ್ಟಿದಧೋರುಕದ ಮಿರುಗುವ ಪೊನ್ನುಡೆ ನೂಲಿನ ಕಿರುಗೆಜ್ಜೆಯ ನಟನಾಟ್ಯಕ್ಕೆ ಸಿದ್ದಳಾಗಿ ನಿಂತಿದ್ದಾಳೆ"

ರತ್ನಕರವರ್ಣಿಯು ಒಬ್ಬ ನರ್ತಕಿಯು ಮುತ್ತಿನಿಂದ ಯಾವ ರೀತಿ ತನ್ನನ್ನು ಶೃಂಗರಿಸಿಕೊಂಡಿದ್ದಳೆಂದು ತಿಳಿಸುವ ಕುರಿತು

***ಮುತ್ತಿನ ಸರ, ತುರುಬಿನ। ಮುತ್ತಿನ ಬಲೆ ಮುತ್ತಿನ ಈಲೆ,***
***ರೊಟ್ಟ ಮೂಗುತಿಯಿಂದ ಮೊಗೆಗಳಿದ್ದವು ತಾರೆ***
***ಮುತ್ತಿನ ಬಾಹುಚಂದ್ರರಂತೆ॥***

ಒಡೆಯರ ಕಾಲದ ನರ್ತಕಿಯರು ಶಿಖಾ(ಕೂದಲನ್ನು ಸುತ್ತಿ ಮೇಲಕ್ಕೆ ಗಂಟು ಹಾಕುವುದು) ರೀತಿಯಲ್ಲಿ ಕೇಶವಿನ್ಯಾಸವನ್ನು ಮಾಡಿಕೊಳ್ಳುತ್ತಿದ್ದರು. ಅಲ್ಲದೆ ತುರುಬಿಗೆ ವಿವಿಧ ರೀತಿಯ ಹೂವುಗಳನ್ನು ಸುತ್ತಿಕೊಳ್ಳುತ್ತಿದ್ದರು ಹಾಗೂ ಅರ್ಧ ಚಂದ್ರ, ಜಡೆಬಿಲ್ಲೆ, ಬೈತಲೆ ಸರಗಳಿಂದ ಶೃಂಗರಿಸಿಕೊಳ್ಳುತ್ತಿದ್ದರು. ಶಿರಕ್ಕಾಗಿಯೇ ಧರಿಸುವಂತಹ ಚೂಡಾಮಣಿ, ಮಕರಿಕಾ, ಮತ್ತು ಮುತ್ತಿನ ಜಾಲಗಳಿಂದ ಅಂದವನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯದಲ್ಲಿ ನೃತ್ಯಗಾರ್ತಿಯರ ಆಭರಣದ ಬಗೆಗೆ ಹೀಗೆ ಉಲ್ಲೇಖಿಸುತ್ತಾನೆ.

***ಪೊಳೆವ ಮುತ್ತಿನ ಮಾತಿಕಟ್ಟು ಸುವರ್ಣದೋಲ್***
***ತಳೆತಳಿಪ ಪೀತಾಂಬರದ***
***ಉಲಿವ ಮೃದಂಗ ಪಾಠಕರ ಗಾಯನದಿಂದ***
***ಲಲನೆಯರನುವಾದರಾಗ***

ಅದಲ್ಲದೆ ಅಂದು ಪ್ರಚಲಿತದಲ್ಲಿದ್ದ ವೈವಿಧ್ಯಮಯವಾದ ಮುತ್ತು, ಹವಳುಗಳ ಬಗೆಗೆ ವಿವರಿಸುತ್ತದೆ.

***ಬಿಳಿಮುತ್ತು  ಕೆನ್ನೀರಿ ಮುತ್ತು ಕಟ್ಟಾಣಿ ಮುತ್ತು***
***ಸಣ್ಣ ಪವಳ ಕೈಕಟ್ಟಿನ ಪವಳ ಗ***
***ಳ್ಗಣ ಸರದ ಜಾತಿ ಪವಳ***
***ತಿಣ್ಣ ವಡೆದ ಪವಳದ ಪಸರಗಳಾಗ***
***ಕಣ್ಣ ಕೊಕ್ಕೆರಿಸು ತೊಪ್ಪಿದ್ದವು***

ಒಡೆಯರ ಕಾಲದಲ್ಲಿ ನರ್ತಕಿಯರು ತಾವು ನರ್ತಿಸುವ ವೇಳೆಯಲ್ಲಿ ಕೇವಲ ಒಂದೇ ವಿಧವಾದ ಸೀರೆಯನ್ನಲ್ಲದೆ ವಿವಿಧ ರೀತಿಯ ಹಲವಾರು ಸೀರೆಗಳನ್ನುಟ್ಟು ನರ್ತಿಸುತ್ತಿದ್ದರು ಅಲ್ಲದೆ ಇದಕ್ಕೆ ಉದಾಹರಣೆಯಾಗಿ

ನೂರೊಂದನ ಸೌಂದರ ತಾವ್ಯದಲ್ಲಿ ನರ್ತಕಿಯರ ವಸ್ತ್ರಗಳ ಬಗ್ಗೆ ವಿಶೇಷವಾಗಿ ಸೀರೆಗಳ ಕುರಿತು ವರ್ಣಿಸಿದ್ದಾನೆ.

***ಪಂಕಜ ಮುಖವು ಮೀನಾಂಕ ಮುರಿವ ನೋಟ। ಶಂಖಗೊರಳು ಗಳಿಮಾತು***
***ಶಕಿನಿ ರಾಯಂಗರೀಟಸೀರೆಯನುಟ್ಟು ನಿ। ಶ್ಯಂಕನೋಲಗದಿ ನಿಂದಿಹಳು***
***ನಾಗಿನಿ ನವಯೌವನೆ ರಾಗಕೋಗಿಲೆ। ಸೋಗೆಗಂಗಳ ಸೋರ್ಮುಡಿಯಂ***
***ರಾಗವಳಿಯಂ ಚಂದ್ರಗಾವಿ ಸೀರೆಯನ್ನುಟ್ಟು। ಭೋಗದೇವೆಂದ್ರನೋಲಗದಿ***
***ನವಯೌವನೆ ರಾಜಹಂಸಗವಂನೆ ಚಲ್ವೆ। ನವನಾಗರಿಕಂಜರನೇಂಬ***
***ನವರತ್ನಾವಳಿ ಪಟ್ಟಾವಳಿ ಸೀರೆಯನ್ನುಟ್ಟು। ದಿವಿಜ ದೇವೇಂದ್ರನೊಲಗದಿ***
***ಕಳಮುಖ ಕಂಬುಕಂಧರ ಕಂಠಾಭರಣ। ಕಳಸಕುಚವುಕಾ,...***
***.......ಗ ನಗರಿಯ ಸೀರೆಯನ್ನುಟ್ಟು। ಎಳೆಪ್ರಾಯದ ಬಲೆ ನಿಂದಿಹಳು***
***ಸೊಗೆಸೊಗಂವಂದದಿ ನಗೆಮುಖ ನಗುವಂತ। ಬಗೆಬಗೆ ಬಿಂಕದೋರಂತಲಿ***
***ಮುಗಿಲಂವಣ್ಣಿಗೆ ಬಗೆ ಬಿಳಿಯ ಸೀರೆಯನುಟ್ಟು। ನಗುತ ಬಂದಳಂ ಓಲಗಕೆ***

*ರಂಭಾನಿ ತಂಬನಿ ರಾಯಂ ಸುಮ್ಮಾನಿ ಕು। ಟುಂಬ ಅನಂಗಜನರಸಿ*
*ಪೊಂಬಾಳೆ ಸಂಳಿ ನೇತ್ರಾವಳಿಯಂ ಸೀರೆಯನ್ನುಟ್ಟು। ರಂಭ ನಿಂದಿಹಳೋಲಗದಿ*
*ಆಣಿ ಚಲ್ವಿಕೆಯೊಳು ಜೂಣಿ ಶೃಂಗಾರಿ ಕಟ್ಟಾಣಿ ಮಾತಿನೊಳು ಸುಪ್ಪಾಣಿ*
*ಕ್ಷೋಣಿಗೊರ್ವಳಂ ವೃಕ್ಷಾವಳಿಯಂ ಸೀರೆಯನ್ನುಟ್ಟು। ಜಾಣಿ ನಿಂದಿಹಳಂ ಓಲಗದಿ*

ಹೀಗೆ ಸೀರೆಗಳಲ್ಲಿ ರಾಯಗರೀಟಸೀರೆ, ಚಂದ್ರಗಾವಿ (ಕೆಂಪು ಬಣ್ಣದ) ಸೀರೆ, ಪಟ್ಟಾವಳಿ ಸೀರೆ (ರೇಷ್ಮೆಯ ಸಿಪಿರೆ), ಬಿಳಿಯಸೀರೆ, ನೇತ್ರಾವಳಿ ಸೀರೆ( ಜರಾತರಿ ವಸ್ತ್ರ), ನಾರಂಗವಟಿ ಸೀರೆ (ಕಿತ್ತಾಳೆ ಬಣ್ಣ), ವೃಕ್ಷಾವಳಿ ಸೀರೆ( ಮರಗಳ ಚಿತ್ರಗಳಿರುವ) ಸೀರೆಗಳನ್ನು ತೊಟ್ಟು ವಿಶೀಷವಾದ ಸಂದರ್ಭಗಳಲ್ಲಿ ನರ್ತಿಸುತ್ತಿದ್ದರು.

ಇಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದ ನರ್ತಕಿಯರು ಧರಿಸಿದ್ದ ಆಭರಣಗಳ ಕುರಿತು ಈ ರೀತಿ ವಿವರಿಸಲಾಗಿದೆ

*ಕಾಲಂದಿಗೆ ಪಿಲ್ಲಿ ಮೇಲೆ ಹೊನ್ನುಡಿದಾರ। ತೋಳ ಬಾಪುರಿ ಭುಜಕೀರ್ತಿ*
*ಓಲೆ ಚಿಂತಾಕ ಕಡಗ ಬಳೆಗಳನ್ನಿಟ್ಟು। ಸೂಳೆಯರಾಳಿ ನಿಂದಿಹರು.*

ಇನ್ನು ಇದಲ್ಲದೆ ನರ್ತಕಿಯರು ಅಶ್ವಾವಳಿ, ಗಜಾವಳಿ, ನರಾವಳಿ, ಮೃಗಾವಳಿ, ಸೂತ್ರಾವಳಿ, ಪುಷ್ಪಾವಳಿ, ಲತಾವಳಿ, ಕುಸುಮಾವಳಿ, ಪುಲಿವಟಿ, ಸೀರೆಗಳನ್ನುಟ್ಟು ನರ್ತಿಸುತ್ತಿದ್ದರು.

ಇದಕ್ಕೆ ಉತ್ತಮ ಉದಾಹರಣೆಯಾಗಿ ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ಆರ್ಟ್ ಗ್ಯಾಲರಿಯಲ್ಲಿನ ನರ್ತಕಿಯ ಛಾಯಾಚಿತ್ರವನ್ನು ಗಮನಿಸಿದಾಗ ವಿಶೇಷವಾಗಿ ನೃತ್ಯಾಗಾರ್ತಿಯು ಸರ್ವಾಭರಣ ಭೂಷಿತೆಯಾಗಿದ್ದಾಳೆ ಧರಿಸಿರುವ ವಸ್ತ್ರದಲ್ಲಿ ಕುಸುರಿ ಕೆಲಸದ ಸ್ಪಷ್ಟ ಚಿತ್ರಣ ದೊರೆಯುತ್ತದೆ ಮುತ್ತುಗಳನ್ನು ಸೇರಿಸಿ ಹೊಲಿದ ಪೈಜಾಮದ ರೀತಿಯ ಉದ್ದ ಚಲ್ಲಣಗಳನ್ನು ಧರಿಸಿದ್ದು, ಅದರ ಮೇಲೆ ಕಟಿ ಭಾಗದಿಂದ ಮೊಣಕಾಲಿನ ಮೇಲಿನ ಭಾಗದವರೆಗೆ ತುಂಡು ಲಂಗವನ್ನು ಅತ್ಯಂತ ಬೆಲೆಬಾಳುವ ಚಿನ್ನದ ಜರಿಯಿಂದ ಹಾಗೂ ಮುತ್ತು ರತ್ನಗಳಿಂದ ಕೂಡಿಸಿ ತಯಾರಿಸಲಾಗಿದ್ದು, ಲಂಗವು ಮುತ್ತುಗಳಿಂದ ಕೂಡಿದ್ದು, ಮೊಣಕಾಲಿನ ಮೇಲೆ ಅಗಲವಾಗಿ ಹರಡಿದೆ. ಲಂಗದ ನೆರಿಗೆಗಳು ತುಂಬಾ ಸ್ಪಷ್ಟವಾಗಿ ಸುಂದರವಾಗಿ ಕಂಡುಬರುತ್ತದೆ ಆಭರಣಗಳಿಗೆ ಸಂಬಂಧಿಸಿದಂತೆ ಪದಕವಿರುವ ಬೈತಲೆ ಬೊಟ್ಟು ಅಥವಾ ತುರುಬನ್ನು ಮಧ್ಯಭಾಗಕ್ಕೆ ಹಾಕಿದ್ದು, ತುರುಬಿಗೆ ಮುತ್ತಿನ ಬಲೆಯನ್ನು ಸುತ್ತಿರುವುದು ಕಂಡುಬರುತ್ತದೆ. ಒಂದೇಳೆಯ ಸಾದಾ ವೃತ್ತಕುಂಡಲ ಹಾಗೂ ಮೇಲ್ಗಿವಿಗೆ ಕೊಪ್ಪು ಸೂತ್ತಲು ಮುತ್ತಿನ ಜಡೆ ಬಿಲ್ಲೆಯ ಪದಕಗಳನ್ನು ಹಾಕಿಕೊಂಡಿರುವುದಲ್ಲದೆ ಕೊಪ್ಪಿಗೆ ಮುತ್ತಿನ ಎಳೆಗಳನ್ನು ಬಿಟ್ಟಿರುವುದನ್ನು ಕಾಣಬಹುದು ನೃತ್ಯವಾಡುತ್ತಿರುವ ಭಂಗಿಯಾಗಿರುವುದರಿಂದ ಹುಬ್ಬುಗಳ ಚಲನೆಯನ್ನು ಛಾಯಚಿತ್ರದಲ್ಲಿ ಅಚ್ಚುಕಟ್ಟಾಗಿ ಮೂಡಿಸಿದ್ದಾರೆ ಹಣೆಗೆ ತಿಲಕವನ್ನು ಧರಿಸಿದ್ದಾಳೆ.

**ಪರಾಮರ್ಶನ/ಆಕರ ಗ್ರಂಥಗಳು**


- ಭಾನುಮತಿ ವೈ.ಸಿ. (1996). *ನೂರೊಂದಯ್ಯ ವಿರಚಿತ ಸೌಂದರ ಕಾವ್ಯ*. ಪ್ರಸಾರಂಗ, ಮೈಸೂರು ವಿಶ್ವವಿದ್ಯಾಯಲಯ.
- ನಿರಂಜನರಾಜ ಅರಸು. (1993). *ಮುಮ್ಮಡಿ ಶ್ರೀ ಕೃಷ್ಣರಾಜ ಮಹಿಪಾಲ ವಂಶರತ್ನಾಕರ.* ವಿಜಯಲಕ್ಷ್ಮಿ ಪ್ರಕಾಶನ.

- ರಂಗನಾಥ. (2012). *ಮೈಸೂರು ದಸರಾ: ಒಂದು ಸಾಂಸ್ಕೃತಿಕ ಅಧ್ಯಯನ.* ಸ್ಫೂರ್ತಿ ಪ್ರಕಾಶನ.
- ರಾಮೇಗೌಡ. (2012). *ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರು.* ಕಾವ್ಯಾಲಯ ಪ್ರಕಾಶನ,
- ಸುಧಾಮಣಿ ಬಿ ವಿ. (2009). *ದಳವಾಯಿ ನಂಜರಾಜಯ್ಯನ ಕಾಲದ ಮೈಸೂರು.* ಅನನ್ಯ ಪ್ರಕಾಶನ
- ಶಾಮಶಾಸ್ತ್ರಿ ಆರ್. (1926). *ಕಂಠೀರರವ ನರಸರಾಜ ವಿಜಯಂ (ಗೋವಿಮದ ವಯದ್ಯ).* ಮೈಸೂರು ವಿಶ್ವವಿದ್ಯಾಲಯ.